₹ 5/-

# ನೇಸರು

## ತಿಂಗಳೋಲೆ

PAGES 20

SEPTEMBER 2023 Nesaru Tingalole Vol. XLI - 09



## ಆ ಚಂದ್ರಚೂಡ ಶಿವಶಕ್ತಿ ಎಂದೆಂದೂ ಎಲ್ಲೆಲ್ಲಿಯೂ ಕುಣಿಯುತ್ತಿರಲಿ

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

**ದಿನಾಂಕ 10-09-2023ರಂದು ಬೆಳಿಗ್ಗೆ 11 ಗಂಟೆಗೆ ಮೈಸೂರು ಅಸೋಸಿಯೇಷನ್‌ನ 97ನೇ ವಾರ್ಷಿಕ ಮಹಾಸಭೆಯು ಅಸೋಸಿಯೇಷನ್ ಮಿನಿ ಸಭಾಗೃಹದಲ್ಲಿ ಜರುಗಲಿದೆ. ಅಸೋಸಿಯೇಷನ್ ಸದಸ್ಯರೆಲ್ಲರೂ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಮಹಾಸಭೆಯಲ್ಲಿ ಹಾಜರಿರಬೇಕಾಗಿ ವಿನಂತಿ.**

## SHREE SWARNA GOWRI & SHREE MAHAGANAPATHI POOJA MAHOTSAVA



## SHREE SHOBHAKRUT NAAMA SAMVATSARA, SHALIVAAHANA SHAKE 1945 (2023)



| | | | |
|---|---|---|---|
| Monday | 18.09.2023 | 10.00 a.m. | Shree Swarna Gowri Pratishtapana Pooja |
| | | 7.30 p.m. | Pooja & Mangalarathi. |
| Tuesday | 19.09.2023 | 9.30 a.m. | Shree Mahaganapathi Pratishtapana Pooja |
| | | 7.30 p.m. | Pooja & Mangalarathi |
| Wednesday | 20.09.2023 | 8.00 a.m. | Pooja & Mangalarathi |
| | | 6.00 p.m. | Bhajans. |
| | | 7.30 p.m. | Pooja & Mangalarathi |
| Thursday | 21.09.2023 | 8.00 a.m. | Pooja & Mangalarathi |
| | | 6.00 p.m. | Bhajans. |
| | | 7.30 p.m. | Pooja & Mangalarathi |
| Friday | 22.09.2023 | 8.00 a.m. | Pooja & Mangalarathi |
| | | 6.00 p.m. | Arasina Kumkuma |
| Saturday | 23.09.2023 | 8.00 a.m. | Pooja & Mangalarathi |
| | | 6.00 p.m. | Bhajans. |
| | | 7.30 p.m. | Pooja & Mangalarathi |
| Sunday | 24.09.2023 | 9.30 a.m. | Pooja & Mangalarathi |
| | | 10.00 a.m. | Veda Ghosha by Vaidikas of Shankar Mutt |
| | | 12.00 noon | Maha Mangalarathi |
| | | | Shri Swarna Gauri & Shri. Ganapathi Immersion |
| | | | Prasada Viniyoga |

### SPONSORS :

**Dr. B. R. Manjunath & Sri. K. Manjunathaiah, Smt. K. Kamala, Smt. & Sri. K. N. Srinivas Rao, Smt. & Sri. Radhakrishnan, Smt. & Sri. Rama Vasant**

*We thank all of you for your active participation and support in making this festival a grand succes*

ನೇಸರು ತಿಂಗಳೋಲೆ

ಸಂಪುಟ 41 ಸೆಪ್ಟೆಂಬರ್-2023 ಸಂಚಿಕೆ 9

# 'ದಯವೇ ಧರ್ಮದ ಮೂಲವಯ್ಯಾ'



**✍ ಡಾ. ಜ್ಯೋತಿ ಸತೀಶ್**

ನಮ್ಮ ಮಾತು, ಕ್ರಿಯೆಗಳಿಂದ ಯಾವ ಜೀವಿಗೂ ನೋವಾಗದಂತೆ ನೋಡಿಕೊಳ್ಳುವುದು ಹಾಗೆಯೇ ನೊಂದವರ ನೋವಿಗೆ ಸ್ಪಂದಿಸುವುದನ್ನು 'ದಯೆ' ಎನ್ನಬಹುದು. ಮನುಷ್ಯಗುಣದಲ್ಲಿ ಇರಲೇಬೇಕಾದ ಗುಣಗಳಲ್ಲಿ ದಯೆ ಅಥವಾ ಕರುಣೆಯೂ ಒಂದು. ಅದಕ್ಕೆ ಅಲ್ಲವೇ ಬಸವಣ್ಣವನರು ಹೇಳಿದ್ದು, 'ದಯವೇ ಧರ್ಮದ ಮೂಲವಯ್ಯಾ' ಎಂದಿರುವುದು. ಸಮಷ್ಟಿ ಹಿತವನ್ನು ಸಾಧಿಸಬೇಕಾದರೆ ದಯವಿರಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಇಲ್ಲವಾದರೆ ಅಲ್ಲಿ ದ್ವೇಷ ರಾಗಗಳು ವಿಜೃಂಭಿಸಿ ಮಾನವೀಯತೆಯ ವಿನಾಶಕ್ಕೆ ಕಾರಣವಾಗುತ್ತದೆ. ಇನ್ನು ನಮ್ಮ ಹಿರಿಯರು 'ವೇದವನ್ನು ಓದಿದವರು ದೊಡ್ಡವರಾಗುವುದಿಲ್ಲ. ಜನರ ವೇದನೆಯನ್ನು ಅರಿತವರು ದೊಡ್ಡವರು' ಅಂದಿರುವುದು ಸುಮ್ಮನೆಯಲ್ಲ.

ಮನೆ ಚಿಕ್ಕದಾಗಿದ್ದರೂ ಪರವಾಗಿಲ್ಲ. ಆದರೆ ಅಲ್ಲಿ ವಾಸಿಸುವವರ ಮನಸ್ಸು ದೊಡ್ಡದಾಗಿರಬೇಕು. ಜೀವನದಲ್ಲಿ ತಪ್ಪುಗಳು ನಡೆಯುವುದು ಸಹಜ. ಆದರೆ ಅದನ್ನು ಕ್ಷಮಿಸಿ, ಜೀವನದಲ್ಲಿ ಮುಂದೆ ಹೋಗುವುದು ಬುದ್ದಿವಂತಿಕೆಯ ಲಕ್ಷಣ. ಕ್ಷಮೆ ಎಂಬುದು ಒಂದು ಪ್ರಬಲ, ಪರಿಣಾಮಕಾರಿ ಅಸ್ತ್ರ. ಎಷ್ಟೋ ಹಿಂಸೆ, ಕ್ರೌರ್ಯ, ಶಿಕ್ಷೆಯಿಂದ ಬದಲಾಗದ ಹಲವು ಸಮಸ್ಯೆಗಳು, ವ್ಯಕ್ತಿಗಳನ್ನು ಒಂದು ಕ್ಷಮೆ ಬದಲಾಯಿಸಬಹುದು. ನಮ್ಮ ಧರ್ಮಗ್ರಂಥಗಳಲ್ಲೂ ಕ್ಷಮೆಗೆ ಬಹಳ ಮಹತ್ವದ ಸ್ಥಾನವಿದೆ. ನಮ್ಮ ರಾಮಾಯಣವನ್ನೇ ತೆಗೆದುಕೊಂಡರೆ, ರಘುಕುಲ ತಿಲಕ ಶ್ರೀರಾಮ, ತನ್ನ ಚಿಕ್ಕಮ್ಮ ಕೈಕಯಿ ತನ್ನ ಪಟ್ಟಾಭಿಷೇಕವನ್ನು ತಪ್ಪಿಸಿ ತನ್ನನ್ನು ಕಾಡುಪಾಲಾಗುವಂತೆ ಮಾಡಿದಳು. ಆದರೂ ಅವಳ ಮೇಲೆ ಒಮ್ಮೆಯೂ ಬೇಸರಗೊಳ್ಳಲಿಲ್ಲ. ವನವಾಸವನ್ನು ಮುಗಿಸಿ ಅರಮನೆಗೆ ಹಿಂತಿರುಗಿದಾಗ, ಕಾಡುಪಾಲು ಮಾಡಿದ ಚಿಕ್ಕಮ್ಮನ ಬಗ್ಗೆ ಮನಸಲ್ಲಿ ಯಾವುದೇ ರೀತಿಯ ಕೋಪವನ್ನು ಇಟ್ಟುಕೊಳ್ಳಲಿಲ್ಲ. ಕೈಕಯಿಯನ್ನು ಕ್ಷಮಿಸುವುದರ ಮೂಲಕ ತನ್ನ ತಪ್ಪಿನ ಅರಿವನ್ನು ಅವಳಿಗೆ ಮಾಡಿಸಿಕೊಟ್ಟ. ಹೀಗೆ ಶ್ರೀರಾಮ ಸಮಾಜಕ್ಕೆ 'ಸನ್ಮಾನ ದೊಡ್ಡದಲ್ಲ, ಸಂಸ್ಕಾರ ದೊಡ್ಡದು, ಹಣ ದೊಡ್ಡದಲ್ಲ, ಗುಣ ದೊಡ್ಡದು' ಎಂಬ ಪಾಠವನ್ನು ಕಲಿಸಿಕೊಟ್ಟ. ಜೀವನದಲ್ಲಿ ನಾವು ಮಾಡಿದ ಪುಣ್ಯಕೆಲಸಗಳ ಪ್ರತಿಫಲ ಒಂದಲ್ಲ ಒಂದು ದಿನ ಅವು ನಮ್ಮ ಜೀವನದಲ್ಲಿ ಮರಳಿ ಬರುತ್ತದೆ.

**********************

ಇಂದು ಭಾರತ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ದಿ ಹೊಂದುತ್ತಿದೆ. ಭಾರತವು ತನ್ನ ಬೃಹತ್ ವೈಜ್ಞಾನಿಕ ಸಾಧನೆಗಳನ್ನು ಮತ್ತು ಬಾಹ್ಯಾಕಾಶ ಸಂಶೋಧನೆಯಲ್ಲಿ ಪ್ರಗತಿಯನ್ನು ತೋರಿಸಲು ಶ್ರಮಿಸುತ್ತಿದೆ. ಅದರ ಪ್ರಮುಖ ಸಾಧನೆಗಳಲ್ಲಿ ಒಂದು ಐತಿಹಾಸಿಕ ಸಾಧನೆ, ಚಂದ್ರಯಾನ –3ರ ಯೋಜನೆಯಾಗಿದೆ. 'ಚಂದ್ರನ ದಕ್ಷಿಣ ಧ್ರುವವನ್ನು ತಲುಪಿದ ಮೊದಲ ದೇಶ – ಭಾರತ' ಎಂಬ ಹೆಗ್ಗಳಿಕೆ ಪಾತ್ರರಾಗಿರೋದು ನಮಗೆಲ್ಲ ಹೆಮ್ಮೆ ತಂದಿದೆ. ಚಂದ್ರನ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಮತ್ತು ವಿಜ್ಞಾನವನ್ನು ಮುನ್ನೆಡಸಲು ಭಾರತದ ದಿಟ್ಟ ಯೋಜನೆಯಲ್ಲಿ ಇದು ಒಂದು ದೊಡ್ಡ ಹೆಜ್ಜೆಯಾಗಿದೆ. ಈ ಮಹತ್ವದ ಸಾಧನೆಗಾಗಿ ಕಾರಣರಾದ ನಮ್ಮ ಇಸ್ರೋ ವಿಜ್ಞಾನಿಗಳಿಗೆ ಮನದಾಳದ ಅಭಿನಂದನೆಗಳು. ಅವರುಗಳು ಪಟ್ಟ ಶ್ರಮ ಸಾರ್ಥಕವಾಗಿದೆ.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎಸ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.
****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

# ಇನ್ನು ಎಲ್ಲಿಗೋಟ...

(ಉಮಾ ರಾವ್ ಕಥೆಗಳು) ✍ **ಉಮಾ ರಾವ್**



ಇವತ್ತು ಬೆಳಿಗ್ಗೆ ನಾನು ಹೇರ್ ಕಟ್ ಮಾಡಿಸಿಕೊಂಡು ಮನೆಗೆ ಬರುತ್ತಲೇ, ಆಗ ತಾನೇ ಆಫೀಸಿಗೆ ಹೊರಟು ನಿಂತಿದ್ದ ಪಪ್ಪ ತುಂಬಾ ಕೋಪಗೊಂಡರು. ಎಂದಿನಂತೆಯೇ ಹಲ್ಲು ಕಚ್ಚಿ ಕೆಳದನಿಯಲ್ಲಿ ರೇಗಿದರು. "ಸ್ಟುಪಿಡ್. ...ಐ ಕಾಂಟ್ ಸ್ಟಾಂಡ್ ದ ಸೈಟ್ ಆಫ್ ಯುವರ್ ಹೇರ್.... ಇದೆಲ್ಲಾ ನಮ್ಮಂಥೋರು ಮಾಡೋದೇ. ನಾಳೆಯಿಂದ ನೀನೂ ಆ ಗಟರಿನಲ್ಲಿ ಓಡಾಡುವ ದಾದಾಗಳ ಥರಾ ಫಳ ಫಳ ಕನ್ನಡಕ ಹಾಕ್ಕೊಂಡು, ಕಿವಿಗೆ ರಿಂಗೂ ಚುಚ್ಚಿಸಿಕೊಂಡು ತಿರುಗ್ತೀಯೋ ಏನೋ..."

"...ಪಪ್ಪಾ...ಲಾಂಗ್ ಹೇರ್ ಈಸ್ ಇನ್ ಫ್ಯಾಶನ್... ನನ್ನ ಫ್ರೆಂಡ್ಸ್ ಎಲ್ಲಾ..." ನನ್ನ ಧ್ವನಿ ಅಲ್ಲೇ ಅಡಗಿಹೋಯಿತು.

"ಫ್ರೆಂಡ್ಸ್ ಎಲ್ಲಾ.... ಅವರ ಜೊತೆ ನೀನೂ ಡ್ರಗ್ಸ್ ತಗೊಂಬಿಡೋ.... ಇಂಥಾ ಮನೆತನದಲ್ಲಿ ಹುಟ್ಟಿ... ಇಂತಾ ದೊಡ್ಡ ಮನುಷ್ಯರ ಮಗನಾಗಿ... ನಾನು ನಾಕು ಜನಕ್ಕೆ ಮುಖ ತೋರಿಸದ ಹಾಗೆ ಮಾಡ್ತೀ... ಈಗಲೇ ಹೋಗಿ ಕತ್ತರಿಸಿಕೊಂಡು ಬಾ.. ಐ ಡೋಂಟ್ ವಾಂಟ್ ಟು ಹಿಯರ್ ಎನಿ ಮೋರ್..."

ಕಾರು ಬಾಗಿಲು ರಪ್ಪನೆ ಹಾಕಿ ಪಪ್ಪ ಭರ್ರನೆ ಮರೆಯಾಗಿದ್ದರು. ಉದ್ದ ಕೂದಲಿಟ್ಟುಕೊಳ್ಳುವುದು ಅಂಥಾ ಅಪರಾಧವೇ? ನನ್ನ ಸ್ನೇಹಿತರೆಲ್ಲಾ ಇಟ್ಟುಕೊಂಡಿರಲಿಲ್ಲವೇ?

ಪಪ್ಪ ಯಾವಾಗಲೂ ಹಾಗೇ, ಹತ್ತವಾಗಿ ಕತ್ತರಿಸಿದ ಕ್ರಾಪ್ ಇಟ್ಟುಕೋ.ಇಸ್ತ್ರೀ ಮಾಡಿದ ಬಟ್ಟೆ, ಲೈಟ್ ಕಲರಿನ ತುಂಬುತೋಳಿನ ಶರ್ಟ್ಸ್, ಮಿರಿ ಮಿರಿ ಮಿರುಗುವ ಲೆದರ್ ಶೂಸ್ ಹಾಕ್ಕೋ. ಟೀ-ಶರ್ಟ್, ಶಾರ್ಟ್ಸ್, ಕ್ಯಾನ್ ವಾಸ್ ಶೂಸ್ - ಅದೂ ಬಿಳಿಯದು ಆಟದ ಹೊತ್ತಿಗೆ ಮಾತ್ರ, ಕ್ಲಾಸಿನಲ್ಲಿ ಫಸ್ಟ್ ಬಾ. ಯಾವಾಗಲೂ ಎಲ್ಲರಿಗಿಂತ ಹೆಚ್ಚು ಮಾರ್ಕ್ಸ್ ತಗೋ. ಕ್ಲಾಸಿಕಲ್ ಮ್ಯೂಸಿಕ್ ಕೇಳು. ಎನ್ಸೈಕ್ಲೋಪಿಡಿಯಾ ಓದು, ಟೀವೀಲಿ ಕ್ವಿಜ್ ಮಾತ್ರ ನೋಡು. ಕಾಮಿಕ್ಸ್, ಪಾಪ್ ರಾಕ್ ಕ್ಯಾಸೆಟ್ಟುಗಳನ್ನು ಮುಟ್ಟಬೇಡ. ದಿನಾ ಬೆಳಗ್ಗೆ ಜಾಗ್ ಮಾಡಿ ಬಾ, ಬ್ರೇಕ್ ಫಾಸ್ಟ್ ತಿನ್ನು. ಆರೋಗ್ಯಕರವಾದ ಹಣ್ಣು, ಬ್ರೆಡ್ಡು, ಕಾರ್ನ್ ಫ್ಲೇಕ್ಸ್, ಹಾಲು, ಜೋರಾಗಿ ಮಾತಾಡಬೇಡ. ಅಳಬೇಡ, ನಗಬೇಡ, ಕೂಗಬೇಡ. ಮ್ಯಾಚ್ ನಲ್ಲಿ ಗೆದ್ದರೇನು ಹಾರಿ ಬಂದು ಕೂಗಿಯೇ ಹೇಳಬೇಕೇ, ನಡೆದು ಬಂದು ಮೆಲ್ಲಗೆ ಹೇಳಬಹುದಲ್ಲಾ? ಸ್ನೇಹಿತರ ಜೊತೆ ಗಂಟೆಗಟ್ಟಲೆ ಫೋನ್ ನಲ್ಲಿ ಹರಟುವ ಅವಶ್ಯಕತೆ ಏನಿದೆ? ಅದೂ ಕೆಲಸಕ್ಕೆ ಬಾರದ ವಿಷಯ. ಎದುರಿಗೆ ಸಿಕ್ಕಾಗಲೇ ಮಾತಾಡಬಹುದಲ್ಲಾ... ಅದೂ ಎಷ್ಟು ಬೇಕೋ ಅಷ್ಟು? ಐಸ್ ಕ್ರೀಂ ಕೋನಿನಲ್ಲೇ ತಿಂದು ಬಾಯೆಲ್ಲಾ ಮೆತ್ತಿಕೊಳ್ಳಬೇಕೇ - ನೀಟಾಗಿ ಕಪ್ ನಲ್ಲೇ ತಿನ್ನಬಹುದಲ್ಲಾ? ಯಾವಾಗಲೂ ಶಿಸ್ತು, ಟೈಮಿಗೆ ಸರಿಯಾಗಿ ಊಟ, ತಿಂಡಿ. ದಿನವೆಲ್ಲಾ ಕೆಲಸ. ಸಂಜೆ ನಾನು, ಅಮ್ಮ, ಟೀವಿ ನ್ಯೂಸ್, ಶನಿವಾರ - ಭಾನುವಾರ ಮನೆ ಕ್ಲೀನಿಂಗ್, ನನ್ನ ಓದಿನ ಬಗ್ಗೆ ಉಸ್ತುವಾರಿ, ಅಮ್ಮನ ಡೆಂಟಿಸ್ಟ್ ಅಪಾಯಂಟ್ ಮೆಂಟ್ ಗಳು. ಟ್ಯಾಕ್ಸ್ ಕನ್ಸಲ್ಟೆಂಟ್ ನೊಂದಿಗೆ ಚರ್ಚೆ. ಆಗಾಗ ರಜಾ ದಿನ ದವೆ ಅಂಕಲ್ ಆಂಟಿ ಮನೆಗೆ ಬರುತ್ತಿದ್ದರು. ಬಂದಾಗ ಅಮ್ಮ ತರತರಹದ ತಿಂಡಿ ಮಾಡುತ್ತಿದ್ದಳು. ಎಲ್ಲರೂ ಸ್ವಲ್ಪ ಹೊತ್ತು ಆಫೀಸಿನ ವಿಷಯ, ಆಮೇಲೆ ಈಗಿನ ಹುಡುಗರು ಕೆಟ್ಟು ಹೋಗಿರುವ ವಿಷಯ ಮಾತಾಡುತ್ತಿದ್ದರು. ಸ್ವಲ್ಪ ಹೊತ್ತಾದ ಮೇಲೆ ಪಪ್ಪ ನನ್ನನ್ನು ರೂಮಿನಿಂದ ಕರೆದು, "ನೋಡು ದವೆ ಅಂಕಲ್, ಆಂಟಿ ಬಂದಿದ್ದಾರೆ" ಎನ್ನುತ್ತಿದ್ದರು. ಸ್ವಲ್ಪ ಹೊತ್ತಾದ ನಂತರ, "ಒಳಗೆ ಹೋಗಿ ಓದ್ಕೋ" ಎನ್ನುತ್ತಿದ್ದರು. ಒಂದೊಂದು ಭಾನುವಾರ ಪಪ್ಪ ನಮ್ಮನ್ನು ಜಂಗಲ್ ಬುಕ್, ಲಾರೆಲ್ ಅಂಡ್ ಹಾರ್ಡಿ, ಚಾರ್ಲಿ ಚಾಪ್ಲಿನ್ ಥರಾ ಸಿನೆಮಾಗೆ ಕರೆದುಕೊಂಡು ಹೋಗುತ್ತಿದ್ದರು. ನಗದೆ ಸಿನಿಮಾ ನೋಡುತ್ತಿದ್ದರು. ಥಿಯೇಟರಿನಲ್ಲಿ ಐಸ್ ಕ್ರೀಂ, ಚ್ಯೂಯಿಂಗ್ ಗಮ್, ಪಾಪ್ ಕಾರ್ನ್ ತಿನ್ನುವ ಹುಡುಗರನ್ನು ದುರುಗುಟ್ಟಿ ನೋಡುತ್ತಿದ್ದರು. ಮಿಥುನ್, ಅಮಿತಾಬ್ ನ ಹೆಸರು ಕೇಳಿಯೇ ಬೆಂಕಿಯಾಗುತ್ತಿದ್ದರು. ಒಂದೊಂದು ಬಾರಿ ಬೀಚಿಗೂ ಕರೆದುಕೊಂಡು ಹೋಗುತ್ತಿದ್ದರು. ಆದರೆ ಅಲ್ಲೂ ಅಷ್ಟೇ. ಬರಿಯ ಮರಳ ಮೇಲೆ ಓಡಾಡಿ ಮನೆಗೆ ಬರಬೇಕು. ಸಮುದ್ರ ನೋಡಿ ಸಂತೋಷಪಟ್ಟರೆ ಸಾಲದೆ? ಒಳಗಿಳಿದು ಮೈಕೈ ಒದ್ದೆ ಮಾಡಿಕೋಬೇಕೇ?

ಅಮ್ಮ ಯಾವುದಕ್ಕೂ ಹೆಚ್ಚು ಮಾತಾಡುತ್ತಿರಲಿಲ್ಲ. ಚೊಕ್ಕವಾಗಿ ಗಂಟು ಹಾಕಿ, ದೊಡ್ಡ ಕುಂಕುಮ ಇಟ್ಟು ಸರ್ಫ್ ಲಲಿತಾಜಿ ಥರಾ ಸೀರೆ ಉಟ್ಟುಕೊಳ್ಳುತ್ತಿದ್ದರು. ನನ್ನ ಊಟ-ತಿಂಡಿ ತುಂಬಾ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ದಿನಾ ನನ್ನ ಯೂನಿಫಾರ್ಮ್ ತಾನೇ ಒಗೆದು ಐರನ್ ಮಾಡುತ್ತಿದ್ದಳು. ನನ್ನ ಆರೋಗ್ಯದ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿದ್ದಳು. ದಿನಾ ಬೆಳಗ್ಗೆ ನನಗೆ, ಪಪ್ಪನಿಗೆ ಟೀವೀಲಿ ಬರುವಂತೆ ನ್ಯೂಟ್ರಮುಲ್ ಕದಡಿ ಕುಡಿಸಿ, ವಿಟಮಿನ್ ಮಾತ್ರೆ ನುಂಗಿಸುತ್ತಿದ್ದಳು. ಪಪ್ಪ ನಕ್ಕಾಗ ನಗುತ್ತಿದ್ದಳು, ಇಲ್ಲದಿದ್ದಾಗ ಸುಮ್ಮನಿರುತ್ತಿದ್ದಳು. ರಾತ್ರಿ ಪಪ್ಪನೊಡನೆ ಬೆಡ್ ರೂಂ ಬಾಗಿಲು ಚಿಲಕ ಹಾಕಿಕೊಂಡು ಮಲಗುತ್ತಿದ್ದಳು. ನಾನು ನನ್ನ ಪುಟ್ಟ ರೂಮಿನಲ್ಲಿ ಮಲಗುತ್ತಿದ್ದೆ. ನನ್ನ ಕಿಟಕಿಯಿಂದ ಕಾಣುತ್ತಿದ್ದ ಮರದ ನೆರಳು ಕಳ್ಳನೆಂದು ಕತ್ತಲಲ್ಲಿ ಭಯವಾದಾಗ ಎದ್ದು ದೀಪ ಹಾಕಿ ಮುದುಡಿ, ಮುಸುಕೆಳೆದು ಮಲಗುತ್ತಿದ್ದೆ. ಪಪ್ಪ ನಾನು ತುಂಬಾ ಚಿಕ್ಕವನಿದ್ದಾಗಲೇ ಹೇಳಿದ್ದರು. "ಒಳ್ಳೆ ಮಕ್ಕಳು ಕೆಟ್ಟ ಕನಸು ಬಿದ್ದರೂ ಅಪ್ಪ ಅಮ್ಮನಿಗೆ ಡಿಸ್ಟರ್ಬ್ ಮಾಡುವುದಿಲ್ಲ" ಅಂತ.

ಅಂದು ಅಜ್ಜಿ ಊರಿಗೆ ಬರುತ್ತಾರೇಂತ ತಿಳಿದಾಗ ನನಗೆ ಎಲ್ಲಿಲ್ಲದ ಸಂತೋಷ. ನಮ್ಮ ಮನೆಗೆ ಹೆಚ್ಚಾಗಿ ನೆಂಟರಾರೂ ಬರುತ್ತಿರಲಿಲ್ಲ. ನನಗೆ ಅಜ್ಜೀನ ನೋಡಿದ ನೆನಪೇ ಇರಲಿಲ್ಲ. ಅಜ್ಜಿ ಹೇಗಿರಬಹುದು? ಮುಖದ ತುಂಬಾ ಸುಕ್ಕು, ಬೊಚ್ಚು ಬಾಯಿ, ಹೊಳೆಯುವ ಕಣ್ಣು, ಗುಂಡು ಕನ್ನಡಕ, ೯ ಗಜ ಸೀರೆಯ ಅಜ್ಜಿ ಬಂದಿಳಿದಾಗ ನನಗೆ ತುಂಬಾ ಇಷ್ಟವಾದರು. ಬಾಯಿ ತುಂಬಾ ಮಾತು, ಮಾತುಮಾತಿಗೂ ನಗು. ದಿನವೆಲ್ಲಾ ನನ್ನೊಡನೆ ಹರಟುತ್ತಿದ್ದರು. ಹಾಡು ಗುನುಗುನಿಸುತ್ತಲೇ ಇರುತ್ತಿದ್ದರು. "ಅಯ್ಯೋ, ಈ ಹುಡುಗ ಹೆಚ್ಚು ಮಾತೇ ಆಡೋಲ್ವಲ್ಲೋ, ವಯಸ್ಸಿಗೆ ಮೀರಿದ ಶ್ರೀಮದ್ಗಾಂಭೀರ್ಯ..." ಎಂದು ರಾಗ ಎಳೆದಿದ್ದರು. "ಮನೇನೂ ಆಫೀಸಿನ ಹಾಗಿಟ್ಟಿದ್ದೀಯಲ್ಲೋ..." ಎಂದು ಪಪ್ಪನಿಗೆ ತಮಾಷೆ ಮಾಡಿ ಬಿದ್ದು ಬಿದ್ದು ನಕ್ಕಿದ್ದರು. ಪಪ್ಪ ಇದನ್ನು ಕೇಳಿಯೂ ಕೇಳದ ಹಾಗೆ ಅಲ್ಲಿಂದ ಹೊರಟುಬಿಟ್ಟಿದ್ದರು.

ಅಜ್ಜಿ ಊರಿಗೆ ಬಂದ ಮೇಲೆ ಪಪ್ಪ ಆಫೀಸಿನಿಂದ ಲೇಟಾಗಿ ಮನೆಗೆ ಬರುತ್ತಿದ್ದರು. ಊಟ ಮಾಡಿ ಸೀದಾ ಬೆಡ್ ರೂಮಿಗೆ ಹೊರಟುಬಿಡುತ್ತಿದ್ದರು.

ಅಂದು ಹೋಲಿ, ನನ್ನ ಕ್ಲಾಸಿನ ಜುಜೂ ತುಂಬಾ ಮಜಾ ಹುಡುಗ. ಸಚಿನ್ ತೆಂಡೂಲ್ಕರ್ ಟೀ-ಶರ್ಟ್ ಹಾಕಿ, ಅವನ ಸ್ಟೈಲಲ್ಲೇ ಬ್ಯಾಟಿಂಗ್ ಮಾಡುತ್ತಿದ್ದ. ಸ್ಕೂಲ್ ಡೇ ನಾಟಕಗಳಲ್ಲಿ ಯಾವಾಗಲೂ ಹೀರೋ ಆಗುತ್ತಿದ್ದ. ಗೋವಿಂದನಂತೆ ಡ್ಯಾನ್ಸ್ ಮಾಡುತ್ತಿದ್ದ ಎಡಬಿಡದೆ ಸರ್ ದಾರ್ ಜೀ ಜೋಕುಗಳನ್ನು ಹೇಳುತ್ತಿದ್ದ. "ಮೇರಾ ನಾಂ ಹೈ ಜುಜೂ... ಜುಜೂ ಚಾವ್ಲಾ" ಎಂದು ಎದೆತಟ್ಟಿ ಹೇಳುತ್ತಿದ್ದ. ದಿನಕ್ಕೊಂದು ರೀತಿಯ ಜೀನ್ಸ್ ಹಾಕುತ್ತಿದ್ದ. ಅವರಪ್ಪ ಕೊಲಾಬಾದಲ್ಲಿ ರೆಡಿಮೇಡ್ ಬಟ್ಟೆಯಂಗಡಿ ಇಟ್ಟಿದ್ದರು. ಅಂದು ನನಗೆ ಹೇಳಿ ಬಿಟ್ಟಿದ್ದ "ಏನೋ ಪ್ರತಿವರ್ಷ ರಂಗ್ ಖೇಲ್ ನಾ ತಪ್ಪಿಸಿಕೊಳ್ತೀ... ಈ ವರ್ಷ ನೋಡೋಣ ಹೇಗೆ ಬಚಾವಾಗ್ತೀ ಅಂತ... ನೀನು ಕೆಳಗೆ ಬರದೆ ಹೋದರೆ, ಮನೆಗೆ ಬಂದು ಬಣ್ಣ ಹಾಕಿ ಎಳೆದುಕೊಂಡು ಹೋಗ್ತೀವಿ."

ನನಗೆ ಭಯವಾಯಿತು. ಗೋಗರೆದೆ.

"ಬೇಡೋ... ಪ್ಲೀಸ್.. ನನ್ನನ್ನು ಬಿಟ್ಬಿಡು... ನಂಗೆ.... ನಾನು...."

"ಚುಪ್... ಅದೆಲ್ಲಾ ನಾವು ಕೇಳೋಕೆ ತಯಾರಿಲ್ಲ.... ನೀನು ಕೆಳಗೆ ಬಂದು ನಮ್ಮೊಡನೆ ಸೇರದೆ ಹೋದರೆ ನಿಮ್ಮ ಮನೆಗೆ ಬರುವುದು ಖಾತ್ರಿ...."

"ಏ... ನಮ್ಮ ಡ್ಯಾಡಿ ತುಂಬಾ ಸ್ಟ್ರಿಕ್ಟ್ ಕಣೋ... ಅವರಿಗೆ ಅದೆಲ್ಲಾ ಸರಿಬೀಳೊಲ್ಲ.

"ಹೋಗೋ ಡ್ಯಾಡಿಗೆ ಹೆದರಿಕೊಳ್ತಾನೆ ಡರಪೋಕ್... ಏನು ಮಾಡ್ತಾರೋ... ನಾನು ನಿಮ್ಮನೇಗೇ ಬಂದು ನೋಡ್ತೀನಿ... ಯೆ ಬಾರ್ ದೇಖೇಂಗೆ ಘರ್ ಮೇ ಕೈಸ ಚುಪ್ ಬೈಠೇಗಾ..."

ಎಲ್ಲ ಹುಡುಗರೂ ಚಪ್ಪಾಳೆ ತಟ್ಟಿದರು.

ಅಂದು ಬೆಳಿಗ್ಗೆ ಹಾಲು ಕುಡಿಯುತ್ತಾ ಡೈನಿಂಗ್ ಟೇಬಲ್ ಮುಂದೆ ಕುಳಿತಿದ್ದಾಗ ನಿಲ್ಲದೆ ಬೆಲ್ಲಾಯಿತು. ನನ್ನ ಎದೆ ಒಡೆಯಿತು. ವಾಂತಿ ಬರುವಂತಾಯಿತು. ಬಾಪ್ ರೆ.... ಅವರೇ?! ನಾನು ಎದ್ದು ಹೋಗುವ ಹೊತ್ತಿಗೆ, ಪಪ್ಪನೆ ಹೋಗಿ ಬಾಗಿಲು ತೆಗೆದರು. ಮೈ ತುಂಬಾ ಬಣ್ಣ ಬಳಿದುಕೊಂಡಿದ್ದ ಜುಜೂ ಕೈ ತುಂಬಾ ಬಣ್ಣದ ಪುಡಿ ಹಿಡಿದು ನಿಂತಿದ್ದ. ಹಿಂದೆಯೇ ಗುಂಪುಕಟ್ಟಿ ನಿಂತಿದ್ದ ಕ್ಲಾಸಿನ ಹುಡುಗರು. ನನ್ನನ್ನು ನೋಡುತ್ತಲೇ ಹೋ ಎಂದು ಕೂಗಿದರು. ನಾನು ಬಾಯಿ ತೆಗೆಯುವ ಮುಂಚೆಯೇ ಜುಜೂ ಹಾರಿ ಒಳಗೆ ಬಂದಿದ್ದ. ನನ್ನತ್ತ ಓಡಿ ಬಂದು, ಮುಖ ಮೈ ತುಂಬಾ ಬಣ್ಣ ಬಳಿದು ನನ್ನನ್ನು ಗಟ್ಟಿಯಾಗಿ ತಬ್ಬಿಕೊಂಡ. "ವಾಟ್, ನಾನ್

ಸೆನ್ಸ್,..." ಪಪ್ಪ ಇದ್ದಕ್ಕಿದ್ದಂತೆ ಗುಡುಗಿದರು. ನಾನು "ಬೆಬ್ಬೆಬ್ಬೆ..." ಎಂದೆ. ದುರುಗುಟ್ಟುತ್ತಾ ಜುಜೂನತ್ತ ಬರತೊಡಗಿದರು. ಅವನಿಂದ ಸ್ವಲ್ಪವೇ ದೂರ ನಿಂತು ಅವನನ್ನು ಕರಗಿಸುವ ಹಾಗೆ ಕೆಂಗಣ್ಣಿನಿಂದ ನೋಡತೊಡಗಿದರು. ನಗಲು ಹೋದ ಜುಜೂನ ಮುಖ ಅವರನ್ನು ನೋಡುತ್ತಾ ನೋಡುತ್ತಾ ಹಾಗೇ ಮುದುಡಿಹೋಯಿತು. ಅವನು ಹಾಗೇ ಕಲ್ಲಾದ. ಮನೆಯೆಲ್ಲಾ ನಿಶ್ಯಬ್ದ ಹರಡಿತು. ನನ್ನನ್ನು ತಬ್ಬಿದ್ದ ಅವನ ತೋಳುಗಳು ನಿಧಾನವಾಗಿ ಸಡಿಲವಾಯಿತು. ಏನು ಮಾಡಲೂ ತಿಳಿಯದೆ, ಎಲ್ಲರ ಮುಖ ನೋಡುತ್ತಾ ಅವನು ಮೆಲ್ಲನೆ ಹೆಜ್ಜೆ ಹಾಕಿ ಹಿಂದೆ ಸರಿದ. ಅವನ ಹಿಂದೆಯೇ ಎಲ್ಲಾ ಹುಡುಗರೂ ಮಾತಿಲ್ಲದೆ ಹೊರಟುಹೋದರು. ಇಷ್ಟೆಲ್ಲಾ ನಡೆದಾಗ, ಅಮ್ಮ ಹಿಂದೆಯೇ ಸುಮ್ಮನೆ ನಿಂತಿದ್ದಳು. ಅಜ್ಜಿ ದೇವರ ಮನೆಯಲ್ಲಿ ಪೂಜೆ ಮಾಡುತ್ತಿದ್ದರು. "ಛಿ... ಆ ದರ್ಜಿಯ ಮಗನ ಜತೆ ಸೇರಿಕೊಂಡು ನೀನೂ...." ಎಂದು ಗೊಣಗುತ್ತಾ ಪಪ್ಪ ಬೆಡ್ ರೂಮಿಗೆ ಹೋದರು. ನಾನೂ ಎಲ್ಲರಂತೆ ಅವರನ್ನು ತಬ್ಬಿಕೊಂಡು ಮಿಠಾಯಿ ಕೊಟ್ಟು ಹೋಳಿ ಆಡಲು ಹೋಗುವ ಹಾಗಿದ್ದರೆ? ನನಗೆ ಕೋಪ, ಅಳು ಒಟ್ಟಿಗೆ ಬಂತು. ಮನೆಯ ಸಾಮಾನೆಲ್ಲಾ ಒಂದೇ ಸಲಕ್ಕೆ ಚೂರು ಚೂರು ಮಾಡ ಬೇಕೆನ್ನಿಸಿತು. ಆವತ್ತು ಊಟ ಸೇರಲಿಲ್ಲ. ಏನೂ ತಿಳಿಯದ ಅಜ್ಜಿ, "ಯಾಕೋ.. ಇವತ್ತು ಊಟಾನೇ ಮಾಡ್ಲಿಲ್ಲ.....ಹುಷಾರಿದ್ದೀ ತಾನೇ?...ಎಂದು ಪ್ರೀತಿಯಿಂದ ಹಣೆ ಮುಟ್ಟಿ ನೋಡಿದರು. ಅಳು ಒತ್ತರಿಸಿ ಬಂದು ತಟ್ಟೆ ಬಿಟ್ಟು ಎದ್ದು ಹೋದೆ, "ಹಸಿವಿಲ್ಲವೇನೋ... ಇರಲಿ ಬಿಡು..." ಎಂದರು ಪಪ್ಪ ಅಮ್ಮ ಸುಮ್ಮನಿದ್ದಳು.

ಅಂದು ಸಂಜೆ ಐದು ಗಂಟೆಗೆ ಕ್ರಿಕೆಟ್ ಆಡುತ್ತೇನಂತ ಹೇಳಿ ಹೊರಗೆ ಹೊರಟೆ. ಬೆಳಗ್ಗೆ ಜುಜೂ ಬಂದು ಹೋದ ಮೇಲೆ ಯಾವುದಕ್ಕೂ ಮನಸ್ಸಿರಲಿಲ್ಲ. ಆದರೆ ಕ್ರಿಕೆಟ್ ಆಡಲು ಮಾತ್ರ ಸಂಜೆ ಹೊರಗೆ ಹೋಗಲು ಪರ್ ಮಿಶನ್ ಸಿಕ್ಕುತ್ತಿತ್ತು. ಬ್ಯಾಟ್ ಕೈಯಲ್ಲಿ ಹಿಡಿದು ಗ್ರೌಂಡ್ಸ್ ನಲ್ಲಿ ಹಾಗೇ ಸುತ್ತಾಡುತ್ತಿದ್ದೆ. ಮೈಯೆಲ್ಲಾ ಬಣ್ಣ ಬಳಿದುಕೊಂಡ, ಪೆಚ್ಚು ಮುಖದ ಜುಜೂ ಮತ್ತೆ ಮತ್ತೆ ಕಣ್ಣು ಮುಂದೆ ಬರುತ್ತಲೇ ಇದ್ದ.

ಇದ್ದಕ್ಕಿದ್ದಂತೆ ರಸ್ತೆಯ ಕೊನೆಯಲ್ಲಿದ್ದ ಪೆಟ್ಟಿಗೆ ಅಂಗಡಿಯ ಹಿಂದೆ ಪಪ್ಪ ಕಣ್ಣಿಗೆ ಬಿದ್ದರು. ಬೆಚ್ಚಿಬಿದ್ದೆ. ಅವರು ನನ್ನತ್ತ ಬೆನ್ನು ಮಾಡಿ ನಿಂತಿ ತಿದ್ದರಿಂದ, ನಾನು ಅವರ ಕಣ್ಣಿಗೆ ಬೀಳಲಿಲ್ಲ. ಹಾಗೇ ಕುತೂಹಲದಿಂದ ಇಲ್ಲೇನು ಮಾಡುತ್ತಿರಬಹುದೆಂದು ನೋಡಲು ಮೆಲ್ಲಗೆ ಸ್ವಲ್ಪ ಹತ್ತಿರ ಹೋದೆ ಅವರ ಕೈಯಲ್ಲಿ ಸಿಗರೇಟು! ಪಪ್ಪ ಅತ್ತ ಇತ್ತ ನೋಡುತ್ತ ದಂ ಎಳೆಯುತ್ತಿದ್ದರು.

ಅಲ್ಲೇ ಸ್ವಲ್ಪ ಹೊತ್ತು ನಿಂತೆ. ತಲೆಯಲ್ಲಿ ಏನೇನೋ ಆಗಿ ಧಿಂ ಅನ್ನತೊಡಗಿತು. ಇದ್ದಕ್ಕಿದ್ದಂತೆ ಮಿಂಚು ಹೊಡೆದಂತಾಯಿತು. ಏನೋ ಜೋಷ್ ಬಂದಿತು. ಓಡೋಡಿ ಮನೆಗೆ ಬಂದೆ. ಮಾರನೆಯ ದಿನ ಸ್ಕೂಲಿನ ರೆಸಿಟೇಶನ್ ಕಾಂಪಿಟೇಶನ್ ಎಂಟ್ರಿ ಫೀಗಾಗಿ ಇಟ್ಟಿದ್ದ ೫ ರೂಪಾಯಿ ತೆಗೆದುಕೊಂಡು ಮತ್ತೆ ಹೊರಗೋಡಿದೆ. "ಏಕೆ.... ಏನಾದ್ರೂ ಮರೆತಿದ್ದೆಯೇನೋ...." ಅಮ್ಮ ಕೂಗುತ್ತಲೇ ಇದ್ದಳು. ಹೂಂಗುಟ್ಟಿ ಸರಕ್ಕನೆ ಓಡಿದೆ.

ಸಂಜೆ ಆರೂವರೆ ಗಂಟೆಗೆ ಮನೆಗೆ ಬಂದವನೇ, ಅಡಿಗೆ ಮನೆಯಿಂದ ಬೆಂಕಿಪೊಟ್ಟಣ ತಂದು ರೂಮಿಗೆ ಬಂದು ಬಾಗಿಲು ಹಾಕಿಕೊಂಡೆ. ಚಿಲಕ ಹಾಕಲಿಲ್ಲ. ನಿಧಾನವಾಗಿ ಸಿಗರೇಟ್ ಹಚ್ಚಿದೆ. ಕೈ ನಡುಗುತ್ತಿತ್ತು. ಎದೆ ಧಡಧಡ ಬಡಿದುಕೊಳ್ಳುತ್ತಿತ್ತು. ಕುರ್ಚಿಯ ಮೇಲೆ ಕುಳಿತು ಮೆಲ್ಲಗೆ ಸಿಗರೇಟ್ ಬಾಯಲ್ಲಿಟ್ಟು ಒಂದು ದಂ ಎಳೆದೆ. ಹೊಗೆಯಿಂದ ಗಂಟಲು ಸಿಕ್ಕಿಹಾಕಿಕೊಂಡು ಜೋರಾಗಿ ಕೆಮ್ಮು ಬಂತು. ಉಸಿರು ಕಟ್ಟಿತು. ತುಂಬಾ ಹಿಂಸೆಯಾಗಿ ಕಣ್ಣಲ್ಲಿ ನೀರು ಸುರಿಯಲಾರಂಭಿಸಿತು. ಕೆಮ್ಮು ಹೆಚ್ಚಾಯಿತು. ಹಚ್ಚಿದ ಸಿಗರೇಟು ಹಾಗೇ ಪೆನ್ಸಿಲ್ ಬಾಕ್ಸ್ ಮೇಲಿಟ್ಟು, ಸುಮ್ಮನೆ ಕುರ್ಚಿಗೆ ಒರಗಿದೆ. ಅದು ನಿಧಾನವಾಗಿ ಹೊಗೆ ಬಿಟ್ಟುಕೊಳ್ಳುತ್ತಾ ಉರಿದು ಬೂದಿಯಾಗತೊಡಗಿತು. ಅದು ಉರಿಯುತ್ತಾ ಉರಿಯುತ್ತಾ ಕರಗುವುದನ್ನು ನೋಡುತ್ತಾ ಹಾಗೇ ಕುಳಿತೆ. ಹೊಗೆಯ ಸುರಳಿಯ ಹಿಂದೆ ಮೈಯೆಲ್ಲಾ ಬಣ್ಣ ಬಳಿದುಕೊಂಡ ಜುಜೂ, ಅವನ ಪೆಚ್ಚು ಮುಖ ಬಂದು ಹೋಗುತ್ತಲೇ ಇತ್ತು. ಇದ್ದಕ್ಕಿದ್ದಂತೆ ಬಾಗಿಲು ತೆಗೆದುಕೊಂಡಾಗ ಬೆಚ್ಚಿ ಬಿದ್ದೆ. ಗಲಿಬಿಲಿಗೊಂಡು ಸರಿಯಾಗಿ ಕುಳಿತೆ! ಪಪ್ಪ! "ಊಟಕ್ಕೆ ಹೊತ್ತಾಯಿತು ಬಾ..ಅಮ್ಮ ಎಷ್ಟು ಸಲ ಕೂಗಿದಳು.. ನಿದ್ದೆ ಮಾಡಿಬಿಟ್ಟಿದ್ದೀಯೇನೋ ಅಂತ..." ಅವರ ಮಾತುಗಳು ತಟ್ಟನೆ ಗಂಟಲಲ್ಲೇ ಅಡಗಿ ಹೋಯಿತು. ಪಪ್ಪನ ಕಣ್ಣು ಸಿಗರೇಟಿನ ಮೇಲೆ ಬಿದ್ದಿತ್ತು. ಸ್ವಲ್ಪ ಹೊತ್ತು ಅದರತ್ತಲೇ ದಿಟ್ಟಿಸಿ ನೋಡಿದರು. ಒಂದೆರಡು ಹೆಜ್ಜೆ ಮುಂದೆ ಬಂದು ಬಗ್ಗಿ ನೋಡಿದರು. ಖಾತ್ರಿ ಮಾಡಿಕೊಳ್ಳಲು. ಅವರ ಮುಖ ಬಿಳಿಚಿಕೊಂಡಿತ್ತು. ಸಿಗರೇಟು ಹೊಗೆಯಾಡುತ್ತಲೇ ಇತ್ತು. ತಟ್ಟನೆ ತಿರುಗಿ ರೂಮಿಂದ ಧಡಧಡನೆ ಹೊರಟು ಹೋದರು.

ನಾನು ನಿಧಾನವಾಗಿ ಎದ್ದು ನೈಟ್ ಸೂಟ್ ಹಾಕಿಕೊಂಡೆ. ಕೈಕಾಲು ತೊಳೆದುಕೊಂಡು ಡೈನಿಂಗ್ ಟೇಬಲ್ ನತ್ತ ನಡೆದೆ. ಬೆಳಗ್ಗಿನಿಂದ ಕವಿದಿದ್ದ ಮುಜುಗರ ಇದ್ದಕ್ಕಿದ್ದಂತೆ ಕಡಿಮೆಯಾಗಿ ಮನಸ್ಸು ಹಗುರಾಗಿತ್ತು. ಹೊರಗೆ ಹುಲ್ಲಿನ ಮೇಲೆ ಬಿದ್ದುಕೊಂಡು, ಆಕಾಶ ನೋಡುತಾ ನಕ್ಷತ್ರಗಳೆಣಿಸುವ ಆಸೆಯಾಯಿತು.

# ಓದುಗರ ಓಲೆ

ನಿನ್ನೆಯ ಸಂಜೆ (24 ಅಗಸ್ಟ್ 2023) ವಿಶ್ವದಲ್ಲಿನ ಲಕ್ಷಾಂತರ ಜನ, 'ವಿಕ್ರಮ್ ಲ್ಯಾಂಡರ್', 'ಸುಂದರ ಚಂದ್ರನ ಮನೆಗೆ ಇಳಿಯುವ ಘಳಿಗೆಗಾಗಿ ವೀಕ್ಷಿಸಿ, ಕಣ್ ತುಂಬಿಕೊಳ್ಳಲು ಕಾದು ಕುಳಿತಿದ್ದರು. ವಿಜ್ಞಾನಿಗಳು ತಮ್ಮ ಕೈನಲ್ಲಿ ಹೃದಯವನ್ನು ಮುಚ್ಚಿಟ್ಟುಕೊಂಡು, ತಮ್ಮ ಸತತ ಪ್ರಯತ್ನ ಫಲಕಾರಿಯಾಗಬೇಕೆಂದು, ಪರಮಾತ್ಮನಲ್ಲಿ ಪ್ರಾರ್ಥನೆ ಮಾಡುತ್ತಾ (ಮನಸ್ಸಿನಲ್ಲಿ) ಆತಂಕದಲ್ಲಿ ಇರುವುದು ಕಾಣುತ್ತಿತ್ತು! ನಮ್ಮಂತಹ ಸಾಮಾನ್ಯ ಜನತೆ ಟಿ.ವಿ. ಮುಂದೆ ಸಾಯಂಕಾಲ 5 ಘಂಟೆಯಿಂದ ಕುಳಿತಿದ್ದೆವು. ಕೊನೆಗೂ ಅನೇಕಾನೇಕ ಅಗ್ನಿಪರೀಕ್ಷೆಯಲ್ಲಿ ಗೆದ್ದು ಮುದ್ದು ಚಂದ್ರನ ಮನೆಯಲ್ಲಿ ಅಡಿ ಇರಿಸಿದಾಗ ನಮ್ಮ ಹಾಗೂ ವಿಶ್ವದ ಅನೇಕಾನೇಕ ವೀಕ್ಷಕರ ಸಂತೋಷ ಸಂಭ್ರಮ ಹೇಳತೀರದು! ಈ ದಿನವನ್ನು ಮರೆಯಲು ಸಾಧ್ಯವೇ ಇಲ್ಲ!



ನವಗ್ರಹಗಳಲ್ಲಿ ಅಬಾಲ ವೃದ್ಧರಿಗೆಲ್ಲರಿಗೂ ಬಹಳ ಪ್ರೀತಿ ಪಾತ್ರವಾದ ಗ್ರಹ. ಚಂದ್ರಮ ಅವನ ಬಗ್ಗೆ ಎಷ್ಟೊಂದು ಹಾಡುಗಳು, 'ಚಂದಮಾಮ ದೂರ್ ಕೆ' ಸಿನಿಮಾ ಹಾಡು ಒಂದೇ ಒಂದಲ್ಲ (ಈಗ ದೂರ ಎಂದನ್ನಿಸುವುದಿಲ್ಲ ಅಲ್ಲವೇ?) ಪ್ರೇಮಪಾಶದಲ್ಲಿ ಬಂಧಿತರಾದವರು ಚಂದ್ರಮುಖಿ ಪ್ರಾಣಸಖಿ ಎಂಬುದಾಗಿ ತಮ್ಮ ಪ್ರೀತಿಯನ್ನು (ಹಳೇ ಕಾಲದಲ್ಲಿ) ಹಾಡಿ ಹೊಗಳುತ್ತಿದ್ದರು. ಅದೊಂದು ಕಾಲ, ಮಕ್ಕಳ ಲಾಲನೆ ಪಾಲನೆ ಮಾಡುವಾಗ ತಿನಿಸುವಾಗ, ಮುಖ್ಯವಾಗಿ ಲಾಲಿ ಹಾಡಿ ಮಕ್ಕಳನ್ನು ಮಲಗಿಸುತ್ತಿದ್ದರು. ಲಾಲಿ ಹಾಡು ಈಗೆಲ್ಲಿ ಅದಕ್ಕೆಲ್ಲಾ ವೇಳೆ ಕೇಳಬೇಡಿ, ಚಂದಮಾಮ ಚಕ್ಕುಲಿಮಾಮ ಮುತ್ತಿನ ಕುಡಿಕೆ ಕೊಡಿ ಮಾಮ, ಕೇಳಿದ್ದೀರಾ? ಶ್ರೀಮದ್ರಾಮಾಯಣ ಒಂದು ಕಥೆ ನೆನಪಿಗೆ ಬರುತ್ತಿದೆ. ಶ್ರೀರಾಮ ಮಗುವಾಗಿದ್ದಾಗ ಒಮ್ಮೆ ಅವರಮ್ಮ ಕೌಸಲ್ಯ, ಊಟ ತಿನ್ನಿಸುತ್ತಿದ್ದಳು. ಆದರೆ ಶ್ರೀರಾಮ ನನಗೆ ಆಕಾಶದಲ್ಲಿ ಕಾಣುವ ಆ ಚಂದ್ರ ಬೇಕು ಎಂದು ಹಠ ಹಿಡಿದು ಅಳುತ್ತಾ ಇದ್ದಾಗ ಅಮ್ಮ ಕೌಸಲ್ಯಗೆ ಹೇಗೆ ಸಮಾಧಾನ ಮಾಡಬೇಕೆಂದು ತಿಳಿಯದೆ ಒದ್ದಾಡುತ್ತಿದ್ದಾಗ ಇದ್ದಕ್ಕಿದ್ದಂತೆ 'ಉಪಾಯ' ಹೊಳೆಯಿತು. 'ಕನ್ನಡಿ'ಯನ್ನು ತಂದು ಅದರಲ್ಲಿ ಚಂದ್ರನ ಪ್ರತಿಬಿಂಬವನ್ನು ತೋರಿಸಿ ಮಗುವಿಗೆ ಊಟ ತಿನ್ನಿಸಿದಳು. ಕಥೆ ಹಿಡಿಸಿತೇ?

✍ ವನಜಾ ರಾಜನ್

## ಹಾರುವ ನಾವು, ಮರೆತೆಲ್ಲಾ ನೋವು..

ಅಂದು ಕೊಳ್ಳುವ ಹೊತ್ತು..
ಹೃದಯಕೆ ರೆಕ್ಕೆಗಳೆರಡು ಮೂಡಿತ್ತು,
ಹಾರುವ ಹೃದಯದ ಹಕ್ಕಿಗೆ..ಮುತ್ತಿಡುವಾಸೆ ಆಗಸದ ಚುಕ್ಕಿಗೆ..
ಸಂಭ್ರಮದ ಸಂತಸ..ಕಂಡಿತು,
ನೋವೇ ಇಲ್ಲದ ಆಗಸ..
ಸ್ವಾಗತಿಸಿ, ಕರೆದಿತ್ತು..
ಕಂಗೊಳಿಸಿ,ಹೊಳೆವ ನಕ್ಷತ್ರಗಳ ರತ್ನ ಗಂಬಳಿ
ಹಾಸಿತ್ತು..
ತಿಳಿಯಲಿಲ್ಲ ಯಾರಿಗೂ..
ಹಾರುತಾ, ಹಾರುತಾ..
ಹೃದಯದ ಪಕ್ಷಿ ಹಾರಿ..ಹೋಗಿತ್ತು..
ದಾಟಿ ಭವ ಬಂಧನಗಳ, ಬಂಧಮುಕ್ತ ವಾಗಿತ್ತು..

✍ ಸುಮನಾ

## ನಗುವಿನ ಆಭರಣ

ಬೇಕೇ ನಿಮಗೆ ದೀರ್ಘ ಆಯುರಾರೋಗ್ಯ ಭಾಗ್ಯ??
ಇಲ್ಲಿದೆ ನೋಡಿ..ಸರಳ,ಸುಂದರ ಉಪಾಯ..
ಕಿಂಚಿತ್ತೂ ಬೇಕಿಲ್ಲ ಹಣ,
ಧರಿಸಲು ಶುದ್ಧ ನಗುವಿನ ಈ ಆಭರಣ,
ನಗುವಿಗಿಂತ ಮದ್ದಿಲ್ಲ,
ಗುಸುಗುಸು,ಪಿಸು ಪಿಸು ಸದ್ದಿಲ್ಲ,
ಬದುಕು ಬೆಂಗಾಡಿನ ಈ ರಣರಣ,
ಚಣದಲಿ ಮಾಯವಾಗುವುದೋ ಜಾಣ,
ಅತ್ತು, ಕರೆದು ಮಾಡುವೆ ಏಕೆ ರಂಪ,ರಾಮಾಯಣ??
ನಗು,ನಗುವ ನಿನ್ನ ಜೀವನ ಧನ್ಯ,
ಹೊತ್ತು ಬರುವುದು ನಿನಗೆ ದೀರ್ಘ ಆಯುರಾರೋಗ್ಯ ಭಾಗ್ಯ,
ನಮ್ಮಂತೆ ನಗುನಗುತಿರಲು..
ಕಿಂಚಿತ್ತೂ ಬೇಕಿಲ್ಲ ಯಾವುದೇ ಹಣ..
ಧರಿಸು ನೀ ಸದಾ,ಹೂವಿನಂಥ
ಶುದ್ಧ ನಗುವಿನ ಈ" ಆಭರಣ."

# ಶ್ರೀ ಸ್ವರ್ಣ ಗೌರಿ ಹಾಗೂ ಶ್ರೀ ಮಹಾಗಣಪತಿ ಮಹೋತ್ಸವ – 2023

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ 1945 ರ ಶ್ರೀ ಶೋಭಕೃತ್ ನಾಮ ಸಂವತ್ಸರದ ಭಾದ್ರಪದ ಶುದ್ಧ ತೃತೀಯ ಸೋಮವಾರ 18.09.2023 ರಂದು ಶ್ರೀ ಸ್ವರ್ಣ ಗೌರಿಯನ್ನು ಮತ್ತು ಚತುರ್ಥಿ ಮಂಗಳವಾರ 19.09.2023 ರಂದು ಶ್ರೀ ಮಹಾಗಣಪತಿಯನ್ನು ಆವಾಹಿಸಿ, ದಶಮಿ ಭಾನುವಾರ ದಿನಾಂಕ 24.09.2023 ರವರೆಗೆ ಉತ್ಸವವನ್ನು ಅಸೋಸಿಯೇಶನ್ನಿನ ಆಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

ದಿನಾಂಕ 24.09.2023 ನೇ ಭಾನುವಾರ ಬೆಳಿಗ್ಗೆ 9.00 ರಿಂದ ಸಕಲ ಪೂಜಾದಿ ಸೇವೆಗಳನ್ನು ಸಲ್ಲಿಸಿ, ಮಹಾ ಮಂಗಳಾರತಿ ಮಾಡಿ ಮೆರವಣಿಗೆಯ ನಂತರ ಗೌರಿ ಗಣಪತಿಯನ್ನು ದಾದರ್ ಸಮುದ್ರ ತೀರದಲ್ಲಿ ವಿಸರ್ಜಿಸಲಾಗುವುದು. ತಾವುಗಳೆಲ್ಲರೂ ಈ ಮಹೋತ್ಸವದಲ್ಲಿ ಭಾಗವಹಿಸಿ, ಉದಾರ ಸಹಾಯ ಮಾಡಿ ಭಗವತ್ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಸೇವಾರ್ಥ ಕೊಡಲಿಚ್ಛಿಸುವವರು ತಮ್ಮ ಹೆಸರು, ಜನ್ಮ ನಕ್ಷತ್ರ, ಗೋತ್ರ, ಪೂಜೆ ನೆರವೇರಿಸಬೇಕಾದ ದಿನಾಂಕ ಬರೆದು ನಮ್ಮ ವಿಳಾಸಕ್ಕೆ ದಿನಾಂಕ 16.09.2023 ರೊಳಗೆ ತಲುಪಿಸಿರಿ ಅಥವಾ email ಮಾಡಿ.

**ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು**

ವಿ.ಸೂ.

1. ಸೇವಾರ್ಥ ನಡೆಸಲಿಚ್ಛಿಸುವವರು 251/– ರೂ.ಗಳ ಅಥವಾ ಹೆಚ್ಚಿನ ಕಾಣಿಕೆಯನ್ನು (ನಗದು/ಚೆಕ್) ಅಂಚೆ ಮೂಲಕ ಕಳುಹಿಸಬಹುದು ಅಥವಾ ಸ್ವತಃ ಅಸೋಸಿಯೇಶನ್ನಿನ ಕಛೇರಿಗೆ ಬಂದು ನೀಡಬಹುದು.
2. ಗೌರಿ ಪೂಜೆಯಲ್ಲಿ ಭಾಗವಹಿಸಲು ಬಯಸುವ ಮಹಿಳೆಯರು ತಮ್ಮ ಹೆಸರನ್ನು ದಿನಾಂಕ 16.09.2023 ರೊಳಗೆ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಕೋರಿಕೆ.
3. ಪೂಜೆ ಕಾರ್ಯಕ್ರಮದ ಅಂಗವಾಗಿ ನಡೆಸುವ ಪ್ರತಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಿಚ್ಛಿಸುವ ಸದಸ್ಯರು ರೂ. 3000/– ವನ್ನು ದೇಣಿಗೆಯಾಗಿ ಕೊಡಬೇಕೆಂದು ವಿನಂತಿ.

## 73rd Year of Shri Swarna Gauri and Shri Mahaganapathi Pooja

In keeping with its glorious tradition, your Association is conducting **Shri Swarna Gauri and Shri Mahaganapathi Pooja** this year also, with all pomp and gaiety from 18.09.2023 to 24.09.2023. This event will be marked by the traditional pooja every morning and cultural programmes followed by traditional pooja in the evenings. The Visarjana will be on 24.09.2023. A detailed programme will be mailed to you in due course. Those desirous of giving “Sevartha” Rs. 251/- or more may please send their cheque to the Mysore Association office, stating the preferred date for pooja along with your name, gotra and nakshatra.

Bank Details:
Name: THE MYSORE ASSOCIATION, BOMBAY
SB A/c No: 54000637287
IFSC code: SBIN0040243
Bank: STATE BANK OF INDIA
Branch: MATUNGA (EAST)



# PUZZLES & TEASERS

**1. Puzzle:** My voice is tender; my waist is slender and I'm often invited to play. Yet wherever I go I must take my bow or else I have nothing to say. What am I?

**2. Puzzle:** Four cars come to a four-way stop, all coming from a different direction. They can't decide who got there first, so they all go forward at the same time. They do not crash into each other, but all four cars go. How is this possible?

**3. Puzzle:** The number 8,549,176,320 is a unique number. What is so special about it?

## Spell it Out

Spell out a two-word place name by traveling from each letter along the lines. You can only go through each circle once. (Hint: it's a statuesque location.) Feeling discouraged?




How many squares do you see?



**A B C D E F G H I J K L M N O P Q R S T U V W X Y Z.**

**Which letter in this alphabet is the eighth letter to the right of the letter and which is tenth letter to the left of the last but one letter of the alphabet?**

A) X B) W C) I D) H

**B) Arrange these words in alphabetical order and tick the one that comes last**

1. Abandon 2. Actuate 3. Accumulate 4. Acquit 5. Achieve

---

**PUZZLES & TEASERS ANSWERS 1) 3 (THREE), 2) CABDE, 3) FRIDAY**

| | | |
|---|---|---|
| R | O | N |
| H | E | I |
| C | L | C |

ANSWER TO NINE LETTER WORD
ANSWER : **CHRONICLE**

CORRECT IMAGE TO VIEW THE BLOCK ANSWER: D

Rebus puzzle worksheet 7 answers

1.Look me in the eye 2. Electric blanket 3. Banknote 4. One foot in the door 5. Bookcase 6. Five kilograms overweight 7. Highway 8. Way to go 9. Toothpick 10. Underdogs 11. Heartbeat 12. Light rain

**PONDICHERRY** is the Indian City with 11 Letters.

Fruit Name : ***CHERRY*** Soap Name : ***RIN*** Bird Name : ***HEN*** Organ : ***CHIN*** Used by Student : ***PEN***

***Compiled by: Mr Ananth Banwasi***

# Why do we want to go to the Moon?

NESARU Report

Humans are ever Migrating species. They cannot stay for long at one place. Even on Earth they have been moving from one continent to the other to inhabit the places. Many times, others have been living in that place, and fresh comers engage in warfare with them. This



fighting spirit to own land is the Human nature. But the space on Earth is shrinking with human population crossing 8 billion. All resources are getting short. Moon is the nearest planet to earth. We know for long from Spectral studies that there is no atmosphere on Moon for us to breath. But the last study by Chandrayaan 1 provided evidence of some frozen water at poles.

The Moon will provide scientists with new views of early Earth, how the Earth-Moon system and the solar system formed and evolved, and the role of asteroid impacts in influencing Earth's history — and possibly future! The Moon presents numerous exciting engineering challenges. Challenges offer possibilities.

**Lunar ice could be a fuel source:** Water is made up of hydrogen and oxygen, and if those two atoms can be separated and stored, they can fuel a rocket. That's because hydrogen and oxygen are highly flammable, and when they are burned together, they release a huge amount of energy–enough to propel a rocket. That means that, at least in theory, lunar ice could provide water to drink, air to breathe, and a source of propellant for spaceships to fuel up and head out.

A lunar-based solar power system would actually be cheaper than Earth-based solar power implemented on a global scale. During the six missions that landed humans on the lunar surface from 1969 to 1972, Apollo astronauts collected some 842 pounds of lunar rocks and dirt. Analysis of these materials has provided us with major clues about the origin of Earth's celestial companion 4.51 billion years ago, but also has revealed the Moon is a treasure trove. Lunar rock contains a plethora of minerals with high industrial value. So, let's take a look at some prime examples of how humanity's expected return to the lunar surface in the years to come could help life here on Earth.

**24/7 solar energy for Earth:** During the 1970s, scientists began examining the Apollo lunar samples to study how the lunar surface could be used as a resource. One such scientist was physicist David Criswell, who has since shown that a lunar-based solar power system would actually be cheaper than Earth-based solar power implemented on a global scale. Whoa! How is that possible, given the high cost of launching people and machines into space?

The key is that it would be enormously expensive to scale up enough Earth-based solar power to supply all of humanity's electrical needs, since solar power on such a scale would require a lot of metal, glass, and cement.

But the Moon's lack of atmosphere and weather means that photovoltaic cells built by robots from lunar materials can be paper thin, in contrast with the heavy structures needed in Earth-based solar arrays. Ringing the Moon, such a system would be in perpetual sunlight, making it cheaper to collect solar power there and beam it down to Earth in the form of microwaves.

A source of helium-3 for clean, safe nuclear fusion power and other uses:

The gas helium-3 is extremely rare on Earth, but plentiful on the Moon, and could be used in advanced nuclear fusion reactors. Helium-3 also has anti-terrorism and medical uses, especially in the diagnosis of various pulmonary diseases.

If we can sustain on Moon, then surviving on Mars and Venus, which have not only atmosphere, but also Water, becomes Easy. If Humans have to survive the next Millenia, pollution on earth has to be reduced. But the problem not understood by many scientists is how to harness energy for all needs works without actually producing Heat. So far, all our energy needs have been met with Engineering of EXO THERRMAL processes. This is the basic problem. On Moon because we need set up stations for humans to survive, we need to find different mechanisms of cooking, travel, or Housing. Yes, Heat is needed on Cold Moon, but how do you produce that heat? These are the questions we need to answer, before we start travelling in space. Moon teaches all these.

But what we need to learn first is, HOW WE CAN STOP FIGHTING AND WASTING ENERGY in inventing ARMAMENTS TO FIGHT WARS and KILL EACH OTHER.

We hope the competition that has already started to go to Moon, will not be wasted in warfare on Moon, between the Nations.

To stop wars, we need to start teaching Kids in school that the World is one Big Family and we are dependent on each other.

If we learn this lesson, then we are FIT TO TRAVEL TO MOON.

# HINDU TRADITION/RELIGION OVER THE YEARS



✍ Dr. B R Manjunath

HINDU is a name given by our neighbours IRNIANS. Iranians lived across the region over current Baloochistan. They are as their name Suggests, Worshippers of Sun RAA, who was worshipped in ancient Egypt, and as MIT RAA in Rome across the Mediterranean, Iranians in the ancient days before Islam ran over the country worshipped INDRAA, NAA SATYA, MITRA and all other DEVA/ SURAs. But Zarathrustra, a Prophet came during 5 Millenia back and asserted that ASURA was the Mightiest and called him AHURA MAZDA. It was common to Iranians to pronounce SA as HA. Thus, ASURA became AHURA. He also banned offering Sacrifice thro Fire/AGNI and also cremation of the dead, as it would pollute the Sacred FIRE. But those among them who differed and believed that FIRE Purifies everything, parted company and migrated across the river SINDHU. Iran being a Barren Country, those who came across this mighty river named it as SINDHU, an Ocean. SAPTA SINDHU, a region of seven rivers, became to the Iranians, HAFTA HINDU.

Those who came across to this land kept their Gods and manner of worship of sacrifice through Fire. The language Avesta and the Rigvedic Language are very similar. Yagna is called Yajana. It is also a Patriarchal society. There are some Minor female Deities like USHAS, who are associated with the SUN. It is not as if there were no other natives in the land of Sapta Sindhu before these migrants came. In Rigveda 10th mandala, they started, "There are already people here, who are dark skinned, and with flat noses and who speak in an unintelligible language. They live in Forts which they call as PURA, and hey call themselves as DASA", confirming there by that they were fresh immigrants. They saw many animals which were all new to them. They named them descriptively. Elephant was named as HASTIN, an animal with a huge hand, Lion as KESHARI, a Hairy animal, Bison as MAHISHA, a huge animal. Rivers as SINDHU and SARAS WATI, a river which is full of ponds or lakes,

ARA means a sharp tool, or an ARROW. In fact, the Latin word ARROW emanates from ARA, A person who wields an ARROW, is ARYA an ARCHER. An Archer who rides a Horse and wields an ARROW looks noble. This is the reason why the term ARYA is mistaken for being noble.

The natives here in worshipped a Mother and Father Gods. The Mother Goddess is Mother Earth herself, from which all lives sprang and were sustained. The Father God sat over the Tall Mountain range which acted as wall to stop all rains, and made this land Fertile. The idea of Mother Goddess was new to the immigrants, who all believed in Fathers.

Elephant and Lion were the most noble animal to the Natives. While Horse was the most noble animal to the immigrants. Horse was swift. All earlier immigrants were names after a Horse, KUWALAYASHWA, YAUWANASHWA etc. No one was named after a Lion. It was the natives who names themselves after a Lion. Thus, SIMMA is a native word, not a Vedic word.

Over time, while the number of Males who came on Horses was small, they had to find themselves women to marry. This is where the story of BRAHMA MANASA PUTRAs who married the daughters of a Matanga Muni Kardama, comes in. All Anasuya, Arundhati, sukarnaya, Khayti, Kala, Havirbhuk comes in. They are all MATNGA KANYAS. Matanga were the native people. Thus, while the natives and immigrants intermarried and became the

forefathers of the present day HINDUs, some communities remained aloof and were segregated

But gradually Mother worship was accepted by the immigrants and PARVATI or Adishakti became an all powerful GODESS. While you do not find SHIVA in Rigveda, he was accepted as a Prime God all over India, and places of Worship of Shiva sprang across all over the land. Overtime, Indra, Upendra, Varuna, Nasatya lost their lustre and became demi Gods. Yagnyas were only performed by the Royals, whereas, Mother and Father worship became common in every village. Mothers became the Ruling Deities in all villages and cities. Thus, the nature of the Gods went on changing and the immigrants accepted the native Gods, while the natives who were more in number continued with their earlier worship.

As those who immigrated were less in number, they tried to distinguish their style of worship of Adityas by performing Yagnya. They crowned a Warrior or being a Son of the SUN. The name RAAJA is actually RAA + JA, RAA is sun and the one born to the Sun is RAAJA. Thus, they retained the right of crowning a King and thus retained the Royal Patronage. Thy called themselves as VIPRA, meaning VIDYA PRAVARTAKA and their Knowledge as VEDA.

The Loaal population continued Agriculture and the Mother Worship

More and more immigrants over the years continued to arrive in this Rain filled fertile land from over the mountains. Shakas came in by thousands from the Land SKETA, and Greeks were the next immigrants. As they came from a Greek province called IONEN, they were named YAVANAs. Many of them did not wish to return with Alexander and Selucus, and they stayed behind and married with the natives, in Rajasthan and Punjab. From the land of Mongols hordes of people came over Himalayas and they also became integrated in the north east. People from Thailanad crossed Burma and came over Arakansas, and settled in Assam on the Brahma Putra River banks and became AHOMS. Many Kazaks and Uzbegs came over during subsequent times. Jews and Arabs came in much later for trade and also settled herein to become one among many cults. But Cults were never a point of hatred as the idea of a religion was not there. YOU TO YOUR OPINION AND ME TO MINE was called MATA (OPINION).

QUESTIONS, OPINIONS AND INVESTIGATIONS

The questions that confronted Humans from the verry beginning are one and the same.

1. **What is this all around me?**
2. **Who created these and who is Ruling all these?**
3. **Where is this all heading to”**
4. **Who am I?**

This Wonder took all the thinking Humans to various paths and opinions.

Thus, in India also many rejected the concept of Adityas like INDRA< CHANDRA< UPENDRA running the world, and started their own Investigations. Their compositions are called ARANYAKAS and UPANISHATS, as they left the Royal Patronage and lived in Forests in seclusion.

Pl read the next edition of NESARU to learn more about the development of HINDUISM.

# Few more strides before the centenary



✍ **M.A.N. Prasad**

**Association is awarded "Karnataka Rajyotsava Prashasti"**

Whenever the officials from Kannada & Culture Department visited Mumbai, they wanted to meet a couple of Kannada organizations and their office bearers. The organizations being spread out in Mumbai, this was difficult. So, often whenever we were aware of the visit of such officials, the Mysore Association would hold a tea or dinner and invite the office bearers of various Kannada organizations. This would enable the concerned official to meet office bearers of many organizations and know about their activities.

In one such visit of the Director of Kannada & Culture, amidst various matters discussed, we suggested that if the Dept. is considering recognition of any organization outside Karnataka it should consider Mogaveera Sangha which is completing its centenary in a year or two. Few days later, around the last week of September I received a call from the director informing me that our Association has been chosen for Karnataka Rajyotsava Prashasti for its outstanding services rendered towards the promotion of Kannada & Culture. He said that the official communication would take 4 to 5 days. He was kind enough to inform us early, so that we could plan to be at Bangalore for the award function on $1^{st}$ November. The President and the Hon. Secretary of the Association attended the function at Bangalore and the President received the award from the hands of Shri. S. M. Krishna, Hon'ble Chief Minister of Karnataka. The award consisted of a gold medallion, a citation and a shawl. Mysore Association was the first organization in Maharashtra to receive such an award.

We met Sudha Murty at this function and invited her to visit the Association during her trip to Mumbai. She came to the Association on her next visit to Mumbai. We took her round the association and NKES School at Wadala. She followed her visit with a generous donation to the school.

**Association hosts a unique Theatre Festival**

Karnataka Nataka Academy had published Hindi translations of 5 popular Kannada plays and wanted us to release them in Mumbai. They approached us in this regard. We felt that this would be meaningful if it can get exposed to the Hindi and Marathi theatre crowd. We believed in doing programmes jointly with other non-Kannada organizations whenever possible so that our customs and culture is exposed to them. In keeping with this concept, we spoke to Prithvi Theatre and roped them in as co-hosts. We planned a two-day festival, with the first day at Mysore Association and the second day at Prithvi Theatre. Well-known theatre personality B.V.Karanth was the Chief Guest of the Festival.

The first day's function was held at the Association. Under this, Mrs. Amita of Udayan released the translation of Lankesh's 'Sankranti'. Shri.P.K. Ravindranath of Udayan spoke about the book. Well-known Marathi artist Shri.Jayadev Hattangadi released "Man Hee Man Dalla Naache", a translation of T.N. Seetharam's well known play ' Nammolage Obba Naajukaiya' and spoke about it. This was followed by the reading of a scene from the play by the theatre group 'Not Quite There". This was followed by an open house with B.V. Karanth.

The second day's function was held at Prithvi Theatre. Nadira Babbar released and spoke about "Sultaan Teepu". Sanjna Kapoor released "Laakh ka Pahad", a translation of "Aragina betta"and spoke about it, and Shri.B.V.Karanth released and spoke about "Kissa Murgi Ka". This was followed by the reading of the play " Lakh ka Pahad" by Not Quite There. During both the days, the books were displayed for sales.

Eminent theatre personalities from both Hindi and Marathi theatre participated in the festival. The event was widely covered in the media.

# Depth of scriptural knowledge of Shirdi Sai Baba



✍ C.S.Dinesh

Nanasaheb Chandorkar one of the close devotees of Shree Sayi Baba was standing near Baba while Baba was having interactions with fellow devotees (but as per Shri Sai Satcharita, Nana was massaging Baba's legs). As the topic was not of much interest to Nana, he started murmuring Gita slok. Baba was alert and asks Nana what is it you are murmuring?

Nana says, "I am chanting Gita slok." Baba asks which slok and from which Chapter?



Nana says, Baba it is slok 34 from fourth chapter of Bhagawad Gita.

Baba then told Nana, whenever you chant any slok always chant loudly so that others also can listen and are benefitted thereby.

Nana agreed to Baba's advice and said, Baba this is the slok:

"Tadviddi pranipaatena…

Pariprashnena sevaya

Upadeshyanti Te Gnyanam

Gnyananinastattwa darshinah"

Baba said, ok. But chant aloud and Nana chanted clearly to make others hear what is being chanted. Now Baba asks Nana for the meaning of the slok he just recited.

Nana then begins to give the meaning of the entire slok comprehensively. Nana says - Baba it is said, when we have any doubt or queries, we should approach a learned pandit who has attained real knowledge, do sashtanga namaskaar to him, do seva to him like we do seva to a gyani. Then for the question posed or doubt raised to the gyani, he will give the requisite gyan or impart knowledge. Now Baba says, you have understood the verse properly but I do not want a consolidated meaning of the slok. Baba asks Nana to give word by word meaning of the slok and explain completely.

Nana then elaborates by saying: - Go to a learned person, prostrate before him with love and respect in heart and do service to him and that learned person will give you knowledge and provide you the essence of the true GYAN.

Not being satisfied, Baba questions Nana - What is pranipaatena?

Nana says - it is doing sashtang Namaskaar.

Baba asks Nana, what does Prashnena mean?

Nana says - it is to question.

Baba again asks Nana- what is meant by Pari prashnena?

Nana says - that also means questioning! Baba then asks Nana- if prashnena and pari prashnena means mere questioning, what purpose does the word Pari serve?

Nana said - I am not aware.

Baba then clarifies and says, it is to question again and again till you get clear answer and with no doubt remaining but do not dare with the intent or improper motive to trap the Guru. In other words, seeking answer from Guru without showcasing any pride and with an attitude of surrender.

Baba then asks - what do you mean by sevaya?

Nana said - it is to serve the Guru to please Him.

Baba clarifies further and says- it is not for doing any favour to Guru but If you understand what is taught by Guru and you put that into practice, that is seva for your Guru. It has to be done in a very humble manner. Then Guru will give you GYAN. Nana then said - Now I have completely understood the deeper purport of the Slok. Baba again posed a question to Nana.

In the third line can you put ‘Aa’ before the word GYAN and see what meaning comes out?

Now Nana gets irritated and says - in none of the commentaries there is anything like this. In that case why should we add ‘Aa’? It is wrong as even Anandgiri has not mentioned any thing like this. Nor in Shankar Bhashya this kind of usage is seen. Thus, Agyan has no place in this slok. I am not clear as to how this could be done. Baba says, if it has not been done before by vedic scholars, will there be any problem for those scholars when you change now? Nana says - no, but I did not think in this line and do not know what meaning it would convey.

Baba asks Nana to replace Gyan with Agyan and analyse the verse in this pattern. In the Sai Satcharitra the topic ends and has not been elaborated as to why Baba asked Nana to replace Gyan with Agyan and what he really meant. What is reason behind Baba telling Nana to put word Agyan in place of GYAN? When GYAN is replaced by Agyan in the slok, let us see how it provides deeper meaning as per our scriptures. Sanskrit is such a language that word to word translation will not serve any purpose to understand reality and what we should do is to seek help from really learned person to derive the actual meaning. When Baba says, put ‘Aa’, he means something more than the literal meaning.

Let us see few illustratations of how Baba puts a task before Nana so that when a personality in form of Baba brings this up Nana can really dive deep into what Baba wants Nana to learn in reality from this quiz. Baba was teaching humility to a student before he goes to a learned person to know essence of knowledge. He should go to a truly learned person who is an enlightened one and there he should be humble in approaching him. He should not have any doubt on Guru about the depth of his knowledge. While questioning he should be sincere with a desire to learn and not to test the Guru’s ability. He shoud not hesitate to ask question repeatedly till such time he has gained the desired knowledge and without leaving any iota of doubt.

Coming to GYAN and Agyan let us see what way our scriptures interpret. In Gita, in

the seventh chapter, 2nd verse- Lord Krishna differentiates between the words Gyan and Vignan. While Gyan is meant for Atma GYAN, Agyan is meant for worldly knowledge.

In the Fourth verse, there is a mention of 3 elements of material energy namely - mind, intellect and ego. There is also mention of the Pancha bhootaas namely - Earth, fire, water, air, and Sky. Totally these eight elements comprise APARA PRAKRUTI and knowledge of this is Gyan.

The fifth verse elaborates on Chetana Shakti and understanding of which is VIGYAN. That Chetana is paramatma controlling every aspect in this universe which is also known as Para Prakruti.

In thirteenth chapter also We see mention of GYAN and Agyan.In verse 12, lord says - Arjuna you look into Adhyathmic GYAN which only can lead you to path of liberation while all other understandings of materialistic world are called as Agyan.

In Isovasya Upanishad Vidya and Avidya are mentioned which stand for GYAN and AGYAN respectively. While Vidya is spiritual knowledge concerning introvert inquiry (about the inner self), Avidya is knowledge of materialistic matters or extrovert information. As said in slok, many people go to mahatma/ learned gyanis not to gain Vidya or GYAN but only for materialistic problems/ desires which is Agyan or Avidya. That is why Baba said this always that - “everybody comes to me for the materialistic probems and I help them”.

So, Baba has said, when you need something or want to understand something correctly by clearing any doubt, go to a Guru and serve him whole heartedly and ask him questions over and over again but with an intent to learn.

So, Baba’s asking Nana to replace ‘Aa’ before the word Gyan, is to affirm that mahatma are there to help you in materialistic needs.

When Baba suggests UPEDEKSHYANTI TE AGYANAM - it does not mean that Guru gives ignorance or illiteracy. Baba by creating confusion in the mind of Nana has cleared him from several doubts that Nana should not take pride in considering himself a scholar just by chanting Gita occasionally. Nana concluded in his mind that Baba was not learned, He did not know Sanskrit, and above all Baba did not know Gita. So, by posing a question to Nana Baba pricked the bubble of his ego. So only after dropping ego he should approach a mahatma to clear such doubts.

Also, Baba reassures that though millions come to him for worldly needs Baba fulfils their desires and develops that Shradda which is first step for Saburi a path for liberation. Path of liberation does not have any short cut and one should drop ego or doer ship and leave everything to Sadguru.

# Music Competiton

On Sunday, 27th August 2023, the Mysore Association had organised a Music Competitions Programme for children in age groups 7 to19 in four music categories - 1. Pure classical vocal in Karnatak music, 2. Kannada Devaranama, 3. Kannada Janapada and 4. Kannada Bhavageete (Sugama Sangeeta). In the morning, there was Electricity Outage for nearly an hour and half but luckily it was restored before the start of the programme at 10.00 am. Thereafter, it was smooth sailing. There were about 100 participants in all. The competitions were judged by 10 judges.



The Classical section was judged by Shri. N. Shekhar and Smt. Padmini Iyer for age groups 7 to 10 and 11 to 14, whereas the third senior group of age above 14 was judged by Smt. Shyamala Radhesh and Smt. Sahara Poti.




The Devaranama section was judged by Smt. Nalini Prasad and Smt. Kala Bhagwat for all three age groups.

The Bhavageete section was judged by Smt. Bharati and Shri Harish Shetty (Kala Jagattu).



The Janapada (folklore) section was judged by Smt. Vidya Rao and Smt. Srividya Hebbale. All were very happy with the response as well as performances. The results are as shown in the table.

Shyamala, Mahati, Lakshmi, Madhu, Umesh, Sanjeeva and Bhavani managed the show. Technical support was provided by Shridhar, Wajid and Thomas. Hema and Saraswati helped in arranging stage and furniture positions.

# The Mysore Association, Mumbai

## KARNATIC MUSIC COMPETITION - 2023 Winners

| Sr. No | Group I<br>Age 7 years to 9 years | Group II<br>Age 10 years to 13 years | Group III<br>Age 14 years to 19 years | Prize |
|---|---|---|---|---|
| 1 | Vinaya Sitaraman | Shrinath Mahesh | Nithyashree Jayaraman | I |
| 2 | - | Mythri Mahesh | Ananya Parvati | |
| 3 | Rishabh Arvind | Mithra Mahesh | Varalakshmi | II |
| 4 | - | - | Sree Lakshmi Ashok Parpala | |
| 5 | Meenakshi Ajith Nair | Dhanwin Jayachandran | Chaithanya Ashok Parpala | III |
| 6 | | | Madhuvanthi Karthik | |
| 7 | | Samagnya Hari | Shruti V. Nair | ENCOURAGEMENT |
| 8 | | Anish Padmanabhan | | ENCOURAGEMENT |

## SUGAMA SANGEET (DEVARANAMA) COMPETITION - 2023

| Sr. No | Group I<br>Age 7 years to 9 years | Group II<br>Age 10 years to 13 years | Group III<br>Age 14 years to 19 years | Prize |
|---|---|---|---|---|
| 1 | Vaishnavi Kamble | Ayush D. Shetty | Nithyashree Jayaraman | I |
| 2 | Aradhana Soni | Ria K. Naik | Chaithanya Ashok Parpala | II |
| 3 | | Vignesh Santosh Shetty | Sree Lakshmi Ashok Parpala | III |
| 4 | | Shriya Rao | Vishesh Jadav | ENCOURAGEMENT |

## SUGAMA SANGEETA (JANAPADA) COMPETITION - 2023

| Sr. No | Group I<br>Age 7 years to 9 years | Group II<br>Age 10 years to 13 years | Group III<br>Age 14 years to 19 years | Prize |
|---|---|---|---|---|
| 1 | Veeksha Santosh Shetty | Varun Manjunatha Devadiga | Sanjita Gouda | I |
| 2 | | Lavya Raghu Shetty | Uday Kamble | II |
| 3 | Latiksha Raghu Poojari | Suvrath R.P. | Laasya Raghu Shetty | ENCOURAGEMENT |

## SUGAMA SANGEET (BHAVAGEETE) COMPETITION - 2023

| Sr. No | Group I<br>Age 7 years to 9 years | Group II<br>Age 10 years to 13 years | Group III<br>Age 14 years to 19 years | Prize |
|---|---|---|---|---|
| 1 | Aadhya Ramesh Mogaveera | Ayush D. Shetty | Aradhya Jamadar | I |
| 2 | | | Sanjita Gouda | |
| 3 | | Varun Manjunatha Devadiga | Manasa Manjunatha Devadiga | II |
| 4 | | Sourabh Suresh Devadiga | Kareena | III |
| 5 | | Suvrath R.P. | Sunita | ENCOURAGEMENT |

# ವಚನ ಸಂಭ್ರಮ

ಈ ಶ್ರಾವಣ ಮಾಸದಲ್ಲಿ ಆ ಚಂದ್ರಚೂಡ ಶಿವ ನಮಗೆ ಎಲ್ಲೆಲೂ ತೋರಿದ್ದುದು ನಮ್ಮ ಭಾಗ್ಯ ಆಗಸ್ಟ್ 18ರಂದು ನಮ್ಮಲ್ಲಿಗೆ ಬಂದು ಕುಣಿದಾಡಿ ಹೋದ. ಮೈಸೂರು ಅಸೋಸಿಯೇಷನ್ ಹಾಗೂ ರಾಷ್ಟ್ರೀಯ ಕನ್ನಡ ಶಿಕ್ಷಣ ಸಂಸ್ಥೆ, ಸೇರಿ ಜರುಗಿಸಿದ ಈ ಕಾರ್ಯಕ್ರಮ ತುಂಬಿದ ಸಭೆಯಲ್ಲಿ ನಡೆಯಿತು.

ನಮ್ಮವಳೇ ಆದ ಸ್ನೇಹ ಕಪ್ಪಣ್ಣ ಒಂದು ಕುಣಿತದ ತಂಡವನ್ನು ತರಬೇತಿ ಮಾಡಿ ಬಸವೇಶ್ವರರ ವಚನಗಳನ್ನು ಹಿಂದಿಯಲ್ಲಿ ಬರೆಸಿ, ಅದಕ್ಕೆ ತಕ್ಕಂತೆ, ಕುಣಿತಗಳನ್ನು ಕೂಡಿಸಿ ನಮಗೆಲ್ಲ ತೋರಿದ್ದುದು ನಾವು ಮರೆಯುವಂತಿಲ್ಲ. ಈ ತಂಡಕ್ಕೆ, ಸಾಣೇಹಳ್ಳಿ ಮಠ ಬೆಂಬಲವನ್ನು ಇತ್ತು, ಭಾರತದಲ್ಲೆಲ್ಲ ಬಸವೇಶ್ವರ ವಚನಗಳನ್ನು ಎತ್ತಿ ತೋರಿಸಿ ನಂತರ ಮುಂಬಯಿಗೆ ಬಂದು ನಮ್ಮೆಲ್ಲರ ಮನವನ್ನು ತಣಿಸಿತು.



ಶಿವ ನಿನ್ನ ಹೊರೆತು ಬೇರಾರೂ ಇಲ್ಲ, ಎಂಬ ಅದ್ವೈತ ತತ್ವವನ್ನು ಸಾರುವುದರಲ್ಲಿ ಯಶಸ್ವಿಯಾಯಿತು. ಯಾರಿಗೆ ಈ ಸರಮುಟ್ಟಬೇಕೆಂಬ ಅರಿವು ಸಂಘನಕಾರರಿಗೆ ಇತ್ತು, ಎಂಬುದಕ್ಕೆ ಸಾಕ್ಷಿಯಾಗಿ, ಈ ಕುಣಿತವನ್ನು ನೋಡಲೆಂದು ಕನ್ನಡ ಶಾಲೆಯ ಮಕ್ಕಳೆಲ್ಲ ಬಂದು ನಲಿದರು.

ಈ ಕಾರ್ಯಕ್ರಮವನ್ನು ಜರುಗಿಸುವುದರಲ್ಲಿ ಶ್ರೀ ಶ್ರೀನಿವಾಸ ಕಪ್ಪಣ್ಣನವರ ಮುಂದಾಳುತನವಿತ್ತು. 25 ಕುಣಿತಗಾರ್ತಿಯರು, ಬೆಳಕು, ಸಂಗೀತ ಮತ್ತು ಮೇಕ್ಅಪ್ ನವರೆಲ್ಲ ಸೇರಿ ಒಂದು ಬಸ್ಸ್‌ನಲ್ಲಿ ಸಾಣೇ ಹಳ್ಳಿಯಿಂದ ಹೈದರಾಬಾದ್, ಭುವನೇಶ್ವರ, ಕಲ್ಕತ್ತ, ಪಾಟ್ನಾ, ಲಕ್ನೋ, ಡೆಹ್ರಾಡೂನ್ ದೆಹಲಿ, ಚಂಡೀಗಡ, ಅಹಮದಾಬಾದ್, ಮುಂಬಯಿ, ಪುಣೆ, ಬಿಜಾಪುರ್, ಶಿವಮೊಗ್ಗಗಳನ್ನೆಲ್ಲ ತಿರುಗಿ ಕನ್ನಡದ ಮಹಿಮೆಯನ್ನು ಸಾರಿದ್ದಾರೆ.



ಇದರಲ್ಲಿ, ಈ ವಚನಗಳನ್ನು ಭಾರತದಲ್ಲೆಲ್ಲ ಸಾರಬೇಕೆಂದು, ರಜೆ ಸಿಗದ್ದಿದ್ದರೆ ತಮ್ಮ ಕೆಲಸಕ್ಕೆ ರಾಜೀನಾಮೆಕೊಟ್ಟು ಬಂದ ಈ ಕುಣಿತ ಗಾರ್ತಿಯರು, ದಿಟಕ್ಕೂ ಎದೆಗಾರ್ತಿಯರು. ಕನ್ನಡ ನಮಗೆ ತಿಳಿದ ಹಲವಾರು ಅಂದರೆ 20 ವಚನಗಳನ್ನು ಕುಣಿದು ತೋರಿದ ಈ ಕಲೆಗಾರ್ತಿಯರಿಗೆ ನಮ್ಮೆಲ್ಲರ ತಲೆಬಾಗಿದೆ.



ಆ ಮಟ್ಟು, ತಪ್ಪಡ ಒಟ್ಟು ಕುಣಿತಗಳು ಮನ ಮುಟ್ಟಿದವು. ವಚನಗಳನ್ನು ಹಾಡುವುದೇ ಕಷ್ಟವೆಂಬುವರಿಗೆ, ವಚನಗಳನ್ನು ಕುಣಿತದ ಮೂಲಕವೂ ತೋರಬಹುದು ಎಂಬುದನ್ನು ಎಲ್ಲರಿಗೂ ಮನದಟ್ಟು ಮಾಡಿತು.

ನಂತರ ಶ್ರೀ ಪಾರ್ಥಸಾರಥಿ ನಾಯಕರು ಎಲ್ಲ ಕಲಾಕಾರರಿಗೆ ಸನ್ಮಾನವನ್ನು ಮಾಡಿದರು. ಸಭೆಯಲ್ಲಿ ಸಾಣೇಹಳ್ಳಿ ಮಠದ ಪೂಜ್ಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಸನ್ನಿಧಿಯಲ್ಲಿ ಈ ವಚನ ಕಾರ್ಯಕ್ರಮ ಜರುಗಿತು. ಪೂಜ್ಯರು ಬಸವೇಶ್ವರರ ಈ ಮಾತುಗಳ ಇಂದಿಗೂ ಸಲ್ಲುವವು ಎಂದರು. ಶಶಿಕಾಂತ ಜೋಶಿ ಹಾಗೂ ಅಪರ್ಣ ಈ ಕಾರ್ಯಕ್ರಮವನ್ನು ಸಭಿಕರ ಮುಂದಿಟ್ಟರು



Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077